ಉ) ಇಲ್ಲಿಯವರೆಗೆ ಕೈಗೊಂಡ ಸುಧಾರಣಾ ಕ್ರಮಗಳಿಂದ ಎಷ್ಟು ಎಕರೆ ಜಮೀನು ಕೃಷಿಗೆ ಯೋಗ್ಯವಾಗಿದೆ?

ಶ್ರೀ ಬಂಡೆಪ್ಪ ಕಾಶಂಪೂರ

ಅ) ಜಮಖಂಡಿ ತಾಲ್ಲೂಕಿನಲ್ಲಿ ಒಟ್ಟು 77,699 ಹೆಕ್ಟೇರ್ ಪ್ರದೇಶವು ಕೃಷಿಗೆ ಯೋಗ್ಯವಾಗಿರುತ್ತದೆ

ಆ) ತಾಲ್ಲೂಕಿನ ಸುಮಾರು 4146 12 ಹೆಕ್ಟೇರ್ ಪ್ರದೇಶವು ಸವಳು–ಜವಳು ಬಂಜರು ಭೂಮಿಯಿಂದ ಕೂಡಿರುತ್ತದೆ

ಇ) ಸವಳು–ಜವಳು ಸಮಸ್ಯೆಯಿಂದ ಪ್ರತಿವರ್ಷ ತಾಲ್ಲೂಕಿನ ಸುಮಾರು 100–150 ಹೆಕ್ಟೇರ್ ಪ್ರದೇಶವು ಹಾಳಾಗುತ್ತಿದೆ

ಈ) ಬಿಸಿಗಾಲುವೆಗಳ ನಿರ್ಮಾಣದ ಮೂಲಕ ಸವಳು–ಜವಳು ಭೂಮಿಯನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಲಾಗುತ್ತಿದೆ

ಉ) ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಸುಮಾರು 975 ಹೆಕ್ಟೇರ್ ಪ್ರದೇಶವನ್ನು ಕೃಷಿಗೆ ಯೋಗ್ಯವನ್ನಾಗಿ ಮಾಡಲಾಗಿದೆ

243(567) ಶ್ರೀ ಸಿದ್ದು ಸಾವದಿ (ಜಮಖಂಡಿ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪದೆಶ್ನೆಗಳಿಗೆ ಉತ್ತರಿಸುವರೇ?

ಅ) ಬಾಗಲಕೋಟೆ ಡಿ ಸಿ ಸಿ ಬ್ಯಾಂಕಿನಿಮ್ ಜಿಲ್ಲೆಯಲ್ಲಿ ಎಷ್ಟು ಸಾಲ ವಿತರಿಸಲಾಗಿದೆ?

ಆ) ಯಾವ ಪ್ರಕಾರ ಮತ್ತು ಯಾವ ಯಾವ ಸಮುದಾಯಕ್ಕೆ ಹೇಗೆ ವಿತರಿಸಲಾಗಿದೆ?

ಇ) ಜಿಲ್ಲೆಯಲ್ಲಿ ನೇಕಾರರೂ ಹೆಚ್ಚಿನ ಪ್ರಮಾಣದಲ್ಲಿದ್ದು ಸಾಕಷ್ಟು ಪ್ರಸ್ತಾವನೆಗಳು ಬಂದರೂ ಸಾಲ ಕೊಡದೇ ಇರುವ ಉದ್ದೇಶವೇನು?

ಈ) ಇನ್ನೂ ಮುಂದಾದರೂ ನೇಕಾರರಿಗೆ ನೇಕಾರರ ಸಹಕಾರ ಸಂಘಗಳ ಮುಖಾಂತರ ಸಾಲವನ್ನು ಕೊಡಲಾಗುವುದೇ?

ಶ್ರೀ ಜಿ ಟಿ ದೇವೇಗೌಡ

ಅ) ಬಾಗಲಕೋಟೆ ಡಿ ಸಿ ಸಿ ಬ್ಯಾಂಕಿನಿಂದ ದಿನಾಂಕ 1–4–2007 ರಿಂದ 30–06–2007 ಎ ಅವಧಿಯಲ್ಲಿ ಕೃಷಿ ಹಾಗೂ ಕೃಷಿಯೇತರ ಉದ್ದೇಶಗಳಿಗಾಗಿ ಒಟ್ಟು ರೂ 19014 32 ಲಕ್ಷಗಳ ಸಾಲ ವಿತರಣೆ ಮಾಡಲಾಗುವುದು

ಆ) ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಿಂದ ಕೃಷಿ ಕೃಷಿಯೇತರ ಪ್ರಕಾರಗಳಿಗೆ ಹಾಗೂ ನೇಕಾರ ಸಮುದಾಯಕ್ಕೆ ಸಕ್ಕರೆ ವಲಯಕ್ಕೆ, ಕೈಗಾರಿಕಾ ವಲಯಕ್ಕೆ, ಸನ್ನಪುಟ್ಟ ವ್ಯಾಪಾರಸ್ತರಿಗೆ ಹಾಗೂ ಸ್ವಸಹಯ ಗುಂಪುಗಳಿಗೆ ಬ್ಯಾಂಕಿನ ನಿಯಮಾವಳಿಯಂತೆ ಸಾಲ ವಿತರಿಸಲಾಗಿದೆ

ಇ) ಬಾಗಲಕೋಟೆ ಜಿಲ್ಲೆಯಲ್ಲಿ 21 ನೇಕಾರ ಸಹಕಾರ ಸಂಘಗಳಿಂದ ಸಾಲದ ಪದೆಸ್ತಾವನೆಗಳು ಬಮದಿದ್ದು ಈ 21 ನೇಕಾರ ಸಂಘಗಳಿಗೆ ಅವುಗಳ ಸಾಲ ಎತ್ತುವ ಸಾಮರ್ಥ್ಯ ಹಾಗೂ ಬ್ಯಾಂಕಿನ ಸಾಲ ಕೊಡುವ ನಿಯಮಾವಳಿಗೊಳಪಟ್ಟು ರೂ 188 84 ಲಕ್ಷ ಸಾಲ ಮಂಜೂರಿ ಮಾಡಿರುತ್ತದೆ ಹಾಗೂ ವಿತರಣೆ ಪ್ರಗತಿಯಲ್ಲಿದೆ

ಈ) ಜಿಲ್ಲೆಯಲ್ಲಿನ ನೇಕಾರರ ಸಹಕಾರ ಸಂಘಗಳಿಗೆ ಅವುಗಳ ಸಾಲ ಎತ್ತುವಳಿ ಮಾಡುವ ಸಾಮರ್ಥ್ಯ ಸಾಲದ ಅರ್ಹತೆ ಹಾಗೂ ಸಾಲದ ಭದ್ರತೆಯನ್ನು ಆಧರಿಸಿ ಸಾಲವನ್ನು ಬ್ಯಾಂಕಿನಿಂದ ಮಂಜೂರಿ ಮಾಡಲು ಕ್ರಮವಿಡಲಾಗುತ್ತದೆ

ಉ) ನೇಕಾರ ಸಹಕಾರ ಸಂಘಗಳ ಮುಖಾಂತರ ಎಲ್ಲಾ ನೇಕಾರರ ಸದಸ್ಯರಿಗೆ ಸಾಲ ಭದ್ರತೆಗೆ ಅನುಗುಣವಾಗಿ ಹಾಗೂ ಬ್ಯಾಂಕಿನ ಸಾಲ ನಿಯಮಾವಳಿಗೊಳಪಟ್ಟು ಹಾಗೂ ಲಭ್ಯವಿರುವ ಸಂಪನ್ಮೂಲದ ಆಧಾರದ ಮೇಲೆ ಸಾಲವನ್ನು ಮಂಜೂರು ಮಾಡಲಾಗುತ್ತಿದ್ದು, ಬ್ಯಾಂಕಿನಿಂದ ನೇಕಾರರಿಗೆ ಸಾಲ ವಿತರಣೆ ಮಾಡಲು ಯೋಜನೆಯನ್ನು ರೂಪಿಸಿ ಕೊಳ್ಳಲಾಗಿರುತ್ತದೆ

240(568) ಶ್ರೀ ಸಿದ್ದು ಸವದಿ (ಜಮಖಂಡಿ)

ಮಾನ್ಯ ಕೃಷಿಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) ಜಮಖಂಡಿ ತಾಲ್ಲೂಕಿನಲ್ಲಿ ರಿಯಾಯ್ತಿ ಬೀಜಗಳ ಕೊರತೆ ಇದ್ದದು ಸರ್ಕಾರಕ್ಕೆ ತಿಳಿದಿದೆಯೇ? ಹಾಗಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ?

2) 2006–07 ರಲ್ಲಿ ಜಮಖಂಡಿ ತಾಲ್ಲೂಕಿಗೆ ಕೊಡಮಾಡಿದ ರಿಯಾಯಿತಿ ಹಣವೆಷ್ಟು ಮತ್ತು ಇಲ್ಲಿಯವರೆಗೆ 2007–08 ರಲ್ಲಿ ಕೊಡಲಾದ ಹಣವೆಷ್ಟು?

3) ಈ ವರ್ಷ ಚೆನ್ನಾಗಿ ಮಳೆ ಆಗಿದ್ದರಿಂದ ಬೀಜದ ಬೇಡಿಕೆ ಹೆಚ್ಚಿದ್ದು ಇದನ್ನು ಪೂರೈಸಲಾಗುವುದೇ?

4) ಯಾವ ಯಾವ ಬೀಜಗಳು ರಿಯಾಯಿತಿ ದರದಲ್ಲಿ ಕೊಡಲಾಗುವುದು (ಸಂಪೂರ್ಣ ವಿವರ ನೀಡುವುದು)

ಶ್ರೀ ಬಂಡೆಪ್ಪಕಾಶಂಪೂರ

1) ಕೊರತೆ ಕಂಡು ಬಂದಿಲ್ಲವಾದ್ದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ